150

Swami Vivekananda

1863 - 2013

ಸ್ವಾಮಿ ನಿತ್ಯಸ್ಥಾನಂದ

ಸ್ವಾಮಿ ವಿವೇಕಾನಂದರ ಜೀವನದೃಷ್ಟಿ

ಸ್ವಾಮಿ ವಿವೇಕಾನಂದರು ಶ್ರೇಷ್ಠ ತತ್ತ್ವಶಾಸ್ತ್ರಜ್ಞ ಮತ್ತು ದಾರ್ಶನಿಕ. ಇದಲ್ಲದೆ ಅವರ ಭಾವನೆಗಳೆಲ್ಲವೂ ಅನುಷ್ಠಾನಪ್ರದವಾದುವು. ವಿವೇಕಾನಂದರನ್ನು ಕ್ರಿಯಾರೂಪಕ್ಕೆ ತರುವುದೆಂದರೆ, ಜೀವನದ ಬಗ್ಗೆ ಅವರ ದೃಷ್ಟಿಕೋನವನ್ನು ನಮ್ಮ ಬಾಳಿನಲ್ಲಿ ಆಚರಣೆಗೆ ತರುವುದೇ ಆಗಿದೆ. ಈ ಅಂಶವನ್ನು ವಿದ್ವತ್ಪೂರ್ಣವಾಗಿ, ಸೋದಾಹರಣವಾಗಿ ವಿವರಿಸಿರುವ ಸ್ವಾಮೀಜಿಯವರು ಪ್ರಸ್ತುತ ರಾಮಕೃಷ್ಣ ಮಹಾಸಂಘದ ಮುಖ್ಯ ಕೇಂದ್ರವಾದ ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿದ್ದಾರೆ. ವಿವೇಕಪ್ರಭ ಪತ್ರಿಕೆಯ ಪ್ರಥಮ ಸಂಪಾದಕರಾಗಿದ್ದ ಇವರು, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಹಿಂದಿನ ಅಧ್ಯಕ್ಷರೂ ಆಗಿದ್ದರು. ಹಲವಾರು ಪುಸ್ತಕಗಳನ್ನು ಮತ್ತು ಅನುವಾದಗಳನ್ನು ರಚಿಸಿರುವ ಇವರು ಗಂಭೀರ ಚಿಂತಕರು ಮತ್ತು ಬರಹಗಾರರು.

ಎಷ್ಟೇ ಸೌಲಭ್ಯಗಳಿದ್ದರೂ ಜೀವನ ಸುಲಭವಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ ಜೀವನವೊಂದು ಹೋರಾಟ. ಎಲ್ಲಿಯವರೆಗೆ ಈ ಹೋರಾಟ ಮುಂದುವರೆಯುವುದೊ ಅಲ್ಲಿಯವರೆಗೆ ಜೀವನವೂ ಮುಂದುವರಿಯುತ್ತದೆ. ಆಂಗ್ಲಭಾಷೆಯಲ್ಲಿ ಹೇಳುವಂತೆ, ಎಲ್ಲಿಯ ವರೆಗೆ ನಾವು ಸೈಕಲ್ಲನ್ನು ತುಳಿಯುತ್ತಿರುತ್ತೇವೊ, ಅಲ್ಲಿಯವರೆಗೂ ಬೀಳುವ ಸಂಭವವಿಲ್ಲ. ಆದರೆ ಈ ಹೋರಾಟವು ಗೋಳಾಟವಿಲ್ಲದೆ ನಡೆಯಬೇಕು. ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಅಧ್ಯಯನ ಮಾಡುವಾಗ ಮುಖ್ಯವಾಗಿ ನಮ್ಮ ಗಮನಕ್ಕೆ ಬರುವ ಅಂಶ ಯಾವುದೆಂದರೆ ಈ ಗೋಳಾಟರಹಿತ ಹೋರಾಟ. ಶ್ರೀಕೃಷ್ಣನ ಸಂದೇಶವೂ ಇದೇ: **ಯುದ್ಧ್ಯಸ್ವ ವಿಗತಜ್ವರಃ** – "ಶೋಕಮೋಹರಹಿತನಾಗಿ ಹೋರಾಡು." ಈ ಹೋರಾಟಕ್ಕೆ ಎರಡು ಮುಖಗಳಿವೆ: ಬಾಹ್ಯ ಮತ್ತು ಆಂತರಿಕ. ನೈಸರ್ಗಿಕ ಮತ್ತು ಸಾಮಾಜಿಕ ಪ್ರತಿಕೂಲ ಪರಿಸ್ಥಿತಿಗಳ ವಿರುದ್ಧ ಹೋರಾಡುವುದು ಬಾಹ್ಯ ಹೋರಾಟ. ಆದರೆ ನಾವು ಹೋರಾಡಬೇಕಾದ ನಿಜವಾದ ಶತ್ರುಗಳಿರುವುದು ನಮ್ಮೊಳಗೇ, ಮತ್ತು ಅವರನ್ನು ಸೃಷ್ಟಿಸಿ ಸಾಕಿ ಸಲಹುತ್ತಿರುವವರೂ ನಾವೇ. ಈ ಆಂತರಿಕ ಶತ್ರುಗಳೇ ಹೊರಗಿನ ಘಟನೆಗಳಲ್ಲಿ ಮತ್ತು ವ್ಯಕ್ತಿಗಳಲ್ಲಿ ಪ್ರತಿಬಿಂಬಿತವಾಗುತ್ತಿರುವುದು. ನಾವು ಹೋರಾಡಬೇಕಾದ ಹೊರಗಿನ ಶತ್ರುಗಳು ನಮ್ಮೊಳಗೇ ಇರುವರೆಂಬ ಅರಿವು ಎಲ್ಲಿಯವರೆಗೆ ನಮಗೆ ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ಹೊರಗಿನ ತೊಂದರೆ ತಾಪತ್ರಯಗಳು ನಮಗೆ ತಪ್ಪಿದ್ದಲ್ಲ. ಒಳಗಿನ ನಾಯಿಯು ಹೊರಗಿನ ನಾಯಿಗಳ ವಿರುದ್ಧ ಬೊಗಳುವುದು ಸ್ವಾಭಾವಿಕ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ. "ವಿಷಯಿ ಜಗತ್ತು ವಿಷಯ ಜಗತ್ತನ್ನು ಆಳುತ್ತಿರುವುದೆಂಬುದನ್ನು ನೋಡಿರುವೆವು. ಅಂತರಂಗದಲ್ಲಿ ಬದಲಾವಣೆ ಉಂಟಾದರೆ ಬಹಿರಂಗದಲ್ಲೂ ಬದಲಾವಣೆ ಆಗಲೇಬೇಕು. ನಿಮ್ಮನ್ನು ಪರಿಶುದ್ಧಗೊಳಿಸಿಕೊಳ್ಳಿ; ಆಗ ಪ್ರಪಂಚವು ಪರಿಶುದ್ಧವಾಗಲೇಬೇಕು. ಹಿಂದೆಂದಿಗಿಂತಲೂ ಮುಖ್ಯವಾಗಿ ಈ ವಿಷಯವನ್ನು ಬೋಧಿಸಬೇಕಾದ ಅವಶ್ಯಕತೆ ಇದೆ. ನಾವೀಗ ಹೆಚ್ಚು ಹೆಚ್ಚಾಗಿ ನೆರೆಹೊರೆಯವರ ವಿಷಯದಲ್ಲಿಯೇ ವ್ಯಸ್ತರಾಗಿರುತ್ತೇವೆ, ನಮ್ಮ ಕಡೆ ಗಮನ ಹರಿಸುವುದೇ ಇಲ್ಲ. ನಾವು ಬದಲಾದರೆ ಪ್ರಪಂಚವೂ ಬದಲಾಗುತ್ತದೆ. ನಾನೇಕೆ ಇತರರಲ್ಲಿ ದೋಷವನ್ನು ಕಾಣುತ್ತೇನೆ ಎನ್ನುವುದು ಪ್ರಶ್ನೆ. ನಾನೇ ದೋಷಯುಕ್ತನಾಗದೆ ದೋಷವನ್ನು ನೋಡಲಾಗುವುದಿಲ್ಲ. ನಾನು ದುರ್ಬಲನಾಗದೆ ದುಃಖಿಯಾಗಲಾಗುವುದಿಲ್ಲ. ಚಿಕ್ಕಂದಿನಲ್ಲಿ ನನಗೆ ದುಃಖವನ್ನು ಉಂಟುಮಾಡುತ್ತಿದ್ದ ವಿಷಯಗಳು ಈಗ ಹಾಗೆ ಮಾಡುವುದಿಲ್ಲ" (ಕೃತಿಶ್ರೇಣಿ, ೬:೩೪೩).

ಶಕ್ತಿಯೇ ಜೀವನ

ಈ ಜೀವನದ ಹೋರಾಟಕ್ಕೆ ನಮಗೆ ಶಕ್ತಿ ಬೇಕು. "ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ" ಎಂಬ ಸ್ವಾಮಿ ವಿವೇಕಾನಂದರ ವಾಣಿಯನ್ನು ಮತ್ತೆ ಮತ್ತೆ ಓದುತ್ತೇವೆ, ಮತ್ತೆ ಮತ್ತೆ ಕೇಳುತ್ತೇವೆ. ಆದರೂ ಮತ್ತೆ ಮತ್ತೆ ದೌರ್ಬಲ್ಯಕ್ಕೆ ಒಳಗಾಗುತ್ತೇವೆ. ಇದರ ದೆಸೆಯಿಂದಾಗಿಯೇ ಹೊರಗಿನ ಘಟನೆಗಳಿಂದ, ವ್ಯಕ್ತಿಗಳಿಂದ ನಾವು ವಿಚಲಿತರಾಗುತ್ತೇವೆ. ಆದರೆ ನಾವು ಇದನ್ನು ಒಪ್ಪಿಕೊಳ್ಳದೆ ಹೊರಗಿನ ಅಂಶಗಳನ್ನು ದೂಷಿಸುತ್ತಾ ಹೋಗುತ್ತೇವೆ, ನನ್ನ ದುಃಖಕ್ಕೆ ಹೊರವಿಷಯಗಳೇ ಕಾರಣ ಎಂದು ಆಂತರಿಕವಾಗಿ ಹೊರವಿಷಯಗಳೊಡನೆ ಹೋರಾಡುತ್ತಿರುತ್ತೇವೆ. "ಅವರು ಹೀಗೆ, ಇವರು ಹೀಗೆ, ಅವರಿವರಿಂದ ನನಗೆ ಹೀಗಾಯಿತು" ಎಂದು ಪರಿತಪಿಸುತ್ತೇವೆ. ಇದರಿಂದಾಗಿ ನಮ್ಮನ್ನೇ ನಾವು ವಿಶ್ಲೇಷಿಸಿ ನಮ್ಮನ್ನು ನಾವು ತಿದ್ದಿಕೊಳ್ಳುವುದನ್ನು ಮರತೇಬಿಡುತ್ತೇವೆ. ಹೊರಗಿನ

ದೋಷಗಳು ನಮ್ಮ ಅಂತರಂಗವನ್ನು ಮುಸುಕಿ ನಮ್ಮ ದೋಷಗಳು ನಮಗೇ ಕಾಣದಂತಾಗಿಬಿಡುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಮಾಡುವ ಆಧ್ಯಾತ್ಮಿಕ ಸಾಧನೆಗಳು, ಉಪವಾಸಾದಿ ವ್ರತಗಳು ನಮ್ಮ ಅಂತಶ್ಶಕ್ತಿಯನ್ನು ವೃದ್ಧಿಸುವ ಬದಲು ನಮ್ಮ ದೌರ್ಬಲ್ಯಗಳನ್ನೇ ಹೆಚ್ಚಿಸಬಹುದು, ಗಿಡಕ್ಕೆ ಹಾಕುವ ನೀರು ಗೊಬ್ಬರಗಳು ಕಳೆಯನ್ನು ವೃದ್ಧಿಸುವಂತೆ.

ನಮಗೆ ಎಲ್ಲ ಬಗೆಯ ಶಕ್ತಿ ಬೇಕು. ಮೊದಲನೆಯದಾಗಿ **ದೈಹಿಕ ಶಕ್ತಿ**. ಆದರೆ ಕುಸ್ತಿಪಟುವಿನ ದೈಹಿಕಶಕ್ತಿಯಲ್ಲ. ಹೊರಗಿನ ರೋಗಾಣುಗಳ ಆಕ್ರಮಣವನ್ನು ಎದುರಿಸುವ ದೇಹರಕ್ಷಣಾ ಶಕ್ತಿ ನಮಗೆ ಅತ್ಯಂತ ಮುಖ್ಯ. ಇದು ಯುಕ್ತಾಹಾರ ವಿಹಾರಾದಿಗಳಿಂದ ಬರುತ್ತದೆ. ಎರಡನೆಯದಾಗಿ **ನರಬಲ**. ಇದಿಲ್ಲದಿದ್ದರೆ ದೇಹಬಲ ಎಷ್ಟೇ ಇದ್ದರೂ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವ ಸಾಮರ್ಥ್ಯವಿರುವುದಿಲ್ಲ. ಮುಂದಿನದು **ಬುದ್ಧಿಶಕ್ತಿ**. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅದರ ಮೇಲೆ ಹಿಡಿತವನ್ನು ಸಾಧಿಸಲೂ, ಬೇರೆಯ ಜನರನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವೂ ಇದರಿಂದ ಬರುತ್ತದೆ. ಇದರಿಂದ ಜ್ಞಾನವೃದ್ಧಿಯೂ ಆಗಿ ನಮ್ಮ ಪಾಲಿಗೆ ಒಂದು ಮಹಾಶಕ್ತಿಯಾಗುತ್ತದೆ. ನಮಗೆ ಅತ್ಯಂತ ಮುಖ್ಯವಾಗಿ ಬೇಕಾಗಿರುವುದು ನಾಲ್ಕನೆಯದು, ಅದೇ **ಇಚ್ಛಾಶಕ್ತಿ**. ಇದರಿಂದ ನಮ್ಮ ಇಂದ್ರಿಯ, ಆಸೆಗಳು, ಭಾವೋದ್ವೇಗ ಇತ್ಯಾದಿಗಳನ್ನು ನಿಗ್ರಹಿಸುವುದರ ಮೂಲಕ ಅಪಾರ **ಚಾರಿತ್ರ್ಯಬಲ**ವನ್ನು ಪಡೆಯಬಹುದು. ಚಾರಿತ್ರ್ಯಬಲದಿಂದ ಎಂತಹ ಕಷ್ಟಗಳನ್ನಾದರೂ ಎದುರಿಸುವ ಸಾಮರ್ಥ್ಯವನ್ನು ನಾವು ಪಡೆಯುತ್ತೇವೆ. ಆತ್ಮನಿಗ್ರಹದಿಂದ ಪಡೆಯುವ ಶಕ್ತಿಸಂಚಯವನ್ನೇ ಚಾರಿತ್ರ್ಯವೆಂದು ಕರೆಯುವುದು (**ನಿಗ್ರಹೇಣಾರ್ಜಿತಾ ಶಕ್ತಿಃ ಚಾರಿತ್ರ್ಯೇತಿ ಚ ಕಥ್ಯತೇ**).

ಎಲ್ಲ ಶಕ್ತಿಗಳಿಗಿಂತ ಅತ್ಯಂತ ಶ್ರೇಷ್ಠವಾದುದು ಆತ್ಮಬಲ, ಅಧ್ಯಾತ್ಮಶಕ್ತಿ. ಈ ಆತ್ಮಬಲದಿಂದಲೇ ಬುದ್ಧನು ಅಂಗುಲಿಮಾಲನನ್ನು ಜಯಿಸಿದುದು. ಶ್ರೀರಾಮಕೃಷ್ಣರ ಜೀವನದಲ್ಲಿಯೂ ಇಂತಹುದೇ ಒಂದು ಘಟನೆ ಬರುತ್ತದೆ. ಶ್ರೀರಾಮಕೃಷ್ಣರ ಭಕ್ತರಲ್ಲಿ ಅಗ್ರಗಣ್ಯಾದ ಯೋಗೀನ್ ಮಾ ದಕ್ಷಿಣೇಶ್ವರಕ್ಕೆ ಪದೇ ಪದೇ ಹೋಗುವುದು ಆಕೆಯ ಅಣ್ಣ ಹಿರಾಲಾಲಾಗೆ ಅಪ್ರಿಯ ವಿಷಯವಾಗಿತ್ತು. ಒಂದು ದಿನ ಶ್ರೀರಾಮಕೃಷ್ಣರು ಯೋಗೀನ್ ಮಾಳ ಕೋರಿಕೆಯಂತೆ ಅವರ ಮನೆಗೆ ಮೊದಲ ಬಾರಿ ಬರುವವರಿದ್ದರು. ಈ ವಿಷಯವನ್ನು ತಿಳಿದ ಹೀರಾಲಾಲ್ ಅವರನ್ನು ಹೆದರಿಸಿ ಓಡಿಸಲು ಮನ್ಮಥನೆಂಬ ಸುಪ್ರಸಿದ್ಧ ಪೈಲ್ವಾನ್ ಹಾಗೂ ಕೊಲೆಗಡುಕನನ್ನು ನಿಯಮಿಸಿದ. ಶ್ರೀರಾಮಕೃಷ್ಣರನ್ನು ಕಂಡು ಅವರ ನುಡಿಗಳನ್ನು ಕೇಳುತ್ತಿದ್ದಂತೆಯೇ ಮನ್ಮಥನು ಕಣ್ಣೀರುಗರೆಯುತ್ತ ಅವರ ಪಾದಪದ್ಮಗಳಿಗೆ ಎರಗಿ, "ಹೇ ಭಗವಂತ, ನನ್ನ ತಪ್ಪನ್ನು ಕ್ಷಮಿಸಿ" ಎಂದು ಬೇಡಿದನು. ಅವರು ಆತನನ್ನು ದಕ್ಷಿಣೇಶ್ವರಕ್ಕೆ ಆಮಂತ್ರಿಸಿದರು. ಮೊದಲ ದಿನವೇ ಬಹಳ ಅಕ್ಕರೆಯಿಂದ ಮಾತನಾಡಿಸಿ, ಕಾಳಿಯ ದೇವಾಲಯಕ್ಕೆ ಅವನನ್ನು ಕರೆದುಕೊಂಡು ಹೋದರು. ಪ್ರದಕ್ಷಿಣೆ ಹಾಕುತ್ತಿರುವಾಗ ಒಂದು ಮೂಲೆಯಲ್ಲಿ ಆತನನ್ನು ಆಶೀರ್ವದಿಸಿದರು, ಹಾಗೂ ಮುಂದಿನ ಭಾನುವಾರ ಬರಲು ಆಹ್ವಾನವಿತ್ತರು. ಸ್ವಾಮಿ ಅಖಂಡಾನಂದರು ಅನೇಕ ವರ್ಷಗಳ ತರುವಾಯ ಆತನನ್ನು ಸಂಧಿಸಿದಾಗ ದಿಗ್ಭ್ರಾಂತರಾದರು. ಆತನ ಶರೀರ ತಪಸ್ಸಿನಿಂದ ಕೃಶವಾಗಿ ಹೋಗಿತ್ತು, ಬಾಹ್ಯಪ್ರಜ್ಞೆಯೇ ಇರಲಿಲ್ಲ. ಅವನಿಗೆ ದೇವರ ಹುಚ್ಚು ಹಿಡಿದುಬಿಟ್ಟಿತ್ತು.

'ದುರ್ಬಲತೆಯೇ ಎಲ್ಲ ಪಾಪಗಳ ಮೂಲ' ಎಂಬುದನ್ನು ಸ್ವಾಮಿ ವಿವೇಕಾನಂದರು ಒತ್ತಿ ಹೇಳುತ್ತಾರೆ. ನಾನೇನಾದರೂ ತಪ್ಪು ಮಾಡಿದರೆ ಮತ್ತು ಅದರ ಪರಿಣಾಮವನ್ನು ಎದುರಿಸುವ ಧೈರ್ಯ ನನಗಿಲ್ಲದಿದ್ದರೆ, ಆಗ ಆ ತಪ್ಪನ್ನು ಮರೆಮಾಚಲು ಸುಳ್ಳು ಹೇಳುತ್ತೇನೆ. ಭ್ರಷ್ಟ ಸಾಮಾಜಿಕ ಪರಿಸರದಲ್ಲಿ ನೀತಿಬದ್ಧನಾಗಿ ಬಾಳುವ ಎದೆಗಾರಿಕೆ ನನಗಿಲ್ಲದಾಗ ಎಲ್ಲರೊಡನೆ ಒಂದಾಗುತ್ತೇನೆ. ಅತಿಯಾಸೆಯನ್ನು ನಿಗ್ರಹಿಸುವ ಶಕ್ತಿ ನನಗಿಲ್ಲದಾಗ ಮೋಸದಿಂದಲಾದರೂ ನನ್ನ ಆಸೆಯನ್ನು ಪೂರ್ತಿಗೊಳಿಸಲು ಪ್ರಯತ್ನಿಸುತ್ತೇನೆ. ನನ್ನ ಅಹಂಕಾರದ ಹಸಿವನ್ನು ತಡೆಯಲಾಗದ ದೌರ್ಬಲ್ಯದಿಂದಾಗಿ ಹೆಸರು ಕೀರ್ತಿ ಸ್ಥಾನ ಮಾನಾದಿಗಳಿಗಾಗಿ ಧೈರ್ಯದಿಂದ ಹೋರಾಡುತ್ತೇನೆ. ನನ್ನ ಭಾವೋದ್ವೇಗಗಳನ್ನು ನಿಗ್ರಹಿಸುವ ಶಕ್ತಿಯಿಲ್ಲದೆ ಹಲವು ಸಂದರ್ಭಗಳಲ್ಲಿ ಅಸಂಬದ್ಧವಾಗಿ ವರ್ತಿಸುತ್ತೇನೆ, ಅಸಂಬದ್ಧವಾಗಿ ಮಾತನಾಡುತ್ತೇನೆ ಹಾಗೂ ಇದರಿಂದಾಗಿ ಉತ್ತಮ ಸಂಬಂಧ ಕಡಿದುಹೋಗುತ್ತದೆ. ಸ್ವಾಮಿ ವಿವೇಕಾನಂದರು ಇಂತಹ ದೌರ್ಬಲ್ಯವನ್ನು ಎತ್ತಿ ತೋರಿಸುತ್ತಾರೆ. "ನೀವೇ ಜಗತ್ತಿನ ಮೇಲೆ ಎಸೆದಿರುವ ಮಾಯೆಯ ಜಾಲವನ್ನು ಕಿತ್ತು ಎಸೆಯಿರಿ. ಮಾನವ ಕೋಟಿಯನ್ನು ದುರ್ಬಲಗೊಳಿಸುವ ಆಲೋಚನೆಗಳನ್ನು, ಮಾತುಗಳನ್ನು ಪ್ರಸಾರ ಮಾಡಬೇಡಿ. ಎಲ್ಲ ಪಾಪಗಳನ್ನು, ಕೇಡುಗಳನ್ನು ಒಂದು ಪದದಲ್ಲಿ ಅಡಕ ಮಾಡಿಬಿಡಬಹುದು. ಆ ಪದ 'ದೌರ್ಬಲ್ಯ'. ಎಲ್ಲ ಪಾಪಗಳನ್ನು ಪ್ರೇರೇಪಿಸುವುದು ದೌರ್ಬಲ್ಯ; ಎಲ್ಲ ಸ್ವಾರ್ಥದ ಮೂಲ ದೌರ್ಬಲ್ಯ. ಇತರರನ್ನು ಹಿಂಸಿಸುವಂತೆ ಮಾಡುವುದು ದೌರ್ಬಲ್ಯ. ಜನರು ನಿಜವಾಗಿ ತಾವು ಏನು ಅಲ್ಲವೋ ಅದರಂತೆ ಕಾಣಿಸಿಕೊಳ್ಳಲು ಪ್ರಯತ್ನಿಸುವುದಕ್ಕೆ ಕಾರಣ ದೌರ್ಬಲ್ಯವೇ" (ಕೃತಿಶ್ರೇಣಿ, ಪು. ೨೮೨).

ಸ್ವಾಮಿ ವಿವೇಕಾನಂದರ ಈ ಶಕ್ತಿ ಸಂದೇಶವು ಜೀವನದ ಎಲ್ಲ ಹಂತಗಳಿಗೂ ಅನ್ವಯವಾಗುತ್ತದೆ. ಇಂದಿನ ಸಂದರ್ಭದಲ್ಲಿ, ಹಲವಾರು ನೇತ್ಯಾತ್ಮಕ ಪ್ರಭಾವಗಳ ನಡುವೆ ಅಂತಃಶಕ್ತಿಯ ಕೊರತೆಯಿಂದಾಗಿ, ಯಾವುದೇ ನಿರ್ದಿಷ್ಟವಾದ ನೆಲೆಯಿಲ್ಲದೆ ನಾವು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿಬಿಡಬಹುದು. ನಮ್ಮ ವ್ಯಕ್ತಿತ್ವದಲ್ಲಿ ನೆಲೆ ನಿಂತು ವಿಕಾಂಗಿಯಾಗಿರುವ ಧೈರ್ಯ ನಮಗಿಲ್ಲದಿದ್ದರೆ ನಾವು ಹಲವು ಪ್ರಭಾವಗಳನ್ನು, ಹಲವು ವ್ಯಕ್ತಿತ್ವಗಳನ್ನು ಪ್ರತಿಬಿಂಬಿಸುವ ಕನ್ನಡಿಯಂತಾಗುತ್ತೇವೆ.

ಅನುಕರಣೆ ಅವನತಿಯ ಚಿಹ್ನೆ

ಈ ಮೇಲಿನ ಕಾರಣದಿಂದಾಗಿಯೇ ಸ್ವಾಮಿ ವಿವೇಕಾನಂದರು ಅನುಕರಣೆಯನ್ನು ಬಹಳವಾಗಿ ಖಂಡಿಸುತ್ತಾರೆ. ಹಲವು ಬಗೆಯ ಅನುಕರಣೆಗಳಿವೆ. ಉಡಿಗೆ, ತೊಡುಗೆ, ನಡೆ, ನುಡಿ, ಹಾವಭಾವ ಮುಂತಾದವುಗಳ ಅನುಕರಣೆ ಬಹಳ ಸ್ಥೂಲವಾದುದು. ಸಾಮಾಜಿಕ ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದಕ್ಕಾಗಿ ನಾವು

ಇತರರನ್ನು ಅನುಕರಿಸುತ್ತೇವೆ. ಉದಾಹರಣೆಗೆ, ಬೇರೆಯವರು ಮದುವೆಗೆ ಒಂದು ಲಕ್ಷ ಖರ್ಚು ಮಾಡಿದರೆ, ನಾವು ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಖರ್ಚು ಮಾಡಬೇಕು – ಸಾಲ ಮಾಡಿ ಮುಂದೆ ತೊಂದರೆಗೆ ಒಳಗಾದರೂ ಪರವಾಗಿಲ್ಲ. ಯಾವುದೋ ಒಂದು ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆಲ್ಲ ಯಾರಾದರೂ ಸಂಸ್ಥೆಯವರು ವಿಶೇಷವಾದ ಬ್ಯಾಗುಗಳನ್ನು ಹಂಚಿದರೆ ಬೇರೆ ಸಂಸ್ಥೆಯವರು ಅದನ್ನೇ ಸ್ವಲ್ಪ ಬದಲಾವಣೆಯೊಂದಿಗೆ ಅನುಕರಿಸುತ್ತಾರೆ. ಯಾರಾದರೂ ಒಬ್ಬ ವ್ಯಕ್ತಿಯು ವ್ಯಕ್ತಿತ್ವನಿರ್ಮಾಣದ ಬಗ್ಗೆ ಮಾತನಾಡಿ ಪ್ರಸಿದ್ಧರಾದರೆ ಇತರರೂ ಹಾಗೆಯೇ ಮಾಡಿ ಪ್ರಸಿದ್ಧರಾಗಲು ಪ್ರಯತ್ನಿಸುತ್ತಾರೆ. ಆಧ್ಯಾತ್ಮಿಕ ಸಾಧನೆಗಳನ್ನು ಅಸ್ವಾಭಾವಿಕವಾಗಿ ಅನುಕರಿಸಿ ಗುರುಪಟ್ಟಕ್ಕೇರುವ ಆಷಾಢಭೂತಿಗಳೂ ಇದ್ದಾರೆ. ಹೀಗೆ ಹಲವು ಬಗೆಯ ಅನುಕರಣೆಗಳಿವೆ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

"ಅಂಧಾನುಕರಣೆ ನಾಗರಿಕತೆಯಲ್ಲ. ಒಬ್ಬ ರಾಜನ ಉಡುಗೆಯನ್ನು ತೊಟ್ಟುಕೊಂಡ ಮಾತ್ರಕ್ಕೆ ನಾನು ರಾಜನಾಗುವುದು ಅಸಾಧ್ಯ. ಸಿಂಹದ ಚರ್ಮವನ್ನು ಹೊದ್ದುಕೊಂಡ ಕತ್ತೆ ಎಂದಿಗೂ ಸಿಂಹವಾಗಲಾರದು. ಅಂಧ ಅನುಕರಣೆ, ವಿಚಾರಹೀನ ಹೇಡಿಯ ಅನುಕರಣೆ ಎಂದಿಗೂ ನಮ್ಮ ಏಳಿಗೆಗೆ ಕಾರಣವಾಗಲಾರದು. ಇಷ್ಟು ಮಾತ್ರವಲ್ಲ, ಅದು ನಮ್ಮ ಅಧೋಗತಿಯ ಹೆಗ್ಗುರುತು. ವ್ಯಕ್ತಿಯು ಯಾವಾಗ ತನ್ನನ್ನು ತಾನೇ ದ್ವೇಷಿಸುತ್ತಾನೆಯೋ, ಆಗ ಅವನನ್ನು ನಾಶಮಾಡುವ ಕೊನೆಯ ಪೆಟ್ಟು ಅವನಿಗೆ ಬಿತ್ತೆಂದು ತಿಳಿಯಿರಿ. ಯಾವನು ತನ್ನ ಪೂರ್ವಿಕರಿಂದ ತನಗೆ ಅವಮಾನವಾಯಿತೆಂದು ಖಿನ್ನಮನಸ್ಕನಾಗುವನೊ, ಆಗ ಅವನಿಗೆ ಕೊನೆಗಾಲ ಸಮೀಪಿಸಿತೆಂದು ತಿಳಿಯಿರಿ... ಯಾವಾಗ ನೀವು ಇತರರ ಅಧೀನಕ್ಕೆ ಒಳಗಾಗುತ್ತೀರೊ, ಆಗ ಎಲ್ಲ ಸ್ವಂತಿಕೆಯನ್ನೂ ಕಳೆದುಕೊಳ್ಳುತ್ತೀರಿ.

"ಧಾರ್ಮಿಕ, ಆಧ್ಯಾತ್ಮಿಕ ವಿಷಯದಲ್ಲಿಯೂ ನೀವು ಇತರರ ಆಜ್ಞಾಧಾರಕರಾದರೆ ನಿಮ್ಮ ಸಹಜ ಶಕ್ತಿಗಳನ್ನು, ಆಲೋಚನಾ ಶಕ್ತಿಯನ್ನು ಕಳೆದುಕೊಳ್ಳುತ್ತೀರಿ. ಶ್ರಮಪಟ್ಟು ನಿಮ್ಮಲ್ಲಿರುವ ಮಹತ್ವವನ್ನು ವ್ಯಕ್ತಗೊಳಿಸಿ, ಅನುಕರಿಸಬೇಡಿ. ಹೀಗೆಂದ ಮಾತ್ರಕ್ಕೆ ಅನ್ಯರ ಸದ್ಗುಣಗಳನ್ನು ನೀವು ಗ್ರಹಿಸಬಾರದೆಂದು ನನ್ನ ಅಭಿಪ್ರಾಯವಲ್ಲ. ಅನ್ಯರಿಂದ ನಾವು ಅನೇಕ ವಿಷಯಗಳನ್ನು ಕಲಿಯಲೇಬೇಕು. ಬೀಜವನ್ನು ನೆಲದಲ್ಲಿ ಬಿತ್ತಿ ಅದು ಚೆನ್ನಾಗಿ ಬೆಳೆಯಲು ಅತ್ಯವಶ್ಯಕವಾದ ಮಣ್ಣು ಗಾಳಿ ನೀರು ಇತ್ಯಾದಿಗಳನ್ನು ಯಥೇಚ್ಛವಾಗಿ ಕೊಟ್ಟರೆ ಆ ಬಿತ್ತಿದ ಬೀಜವು ಗಿಡವಾಗಿ ಅನಂತರ ಹೆಮ್ಮರವಾಗುತ್ತದೆಯಲ್ಲದೆ, ಅದು ಮಣ್ಣು ಗಾಳಿ ನೀರು ಇವುಗಳಲ್ಲಿ ಯಾವುದೂ ಆಗುವುದಿಲ್ಲ. ತನಗೆ ಕೊಟ್ಟುದೆಲ್ಲವನ್ನೂ ತನ್ನೊಳಗೆ ಹೀರಿಕೊಂಡು ತನ್ನ ಸ್ವಭಾವಾನುಸಾರ ಅದು ದೊಡ್ಡ ಗಿಡ ಅಥವಾ ಮರವಾಗುತ್ತದೆ. ನೀವೂ ಹೀಗೇ ಮಾಡಬೇಕು... ಇತರರ ಸದ್ಗುಣಗಳೆಲ್ಲವನ್ನೂ ಕಲಿಯಿರಿ, ಆದರೆ ಅವುಗಳನ್ನು ನಿಮ್ಮದೇ ಆದ ರೀತಿಯಲ್ಲಿ ನಿಮ್ಮವನ್ನಾಗಿ ಮಾಡಿಕೊಳ್ಳಿ. ನೀವೇ ಅನ್ಯರಾಗಬೇಡಿ"(ಕೃತಿಶ್ರೇಣಿ, ಪು. ೨೪೧–೪೨).

ನಮ್ಮಲ್ಲಿರುವುದೇ ಹೊರಗೆ ಕಾಣುವುದು

ಸ್ವಾಮಿ ವಿವೇಕಾನಂದರೇ ಸೂಚಿಸುವಂತೆ, ಅನುಕರಣೆ ಮತ್ತು ಆತ್ಮದ್ವೇಷ – ಇವೆರಡೂ ಆಂತರಿಕ ಶೂನ್ಯತೆಯಿಂದ ಉಂಟಾಗುತ್ತವೆ. ಆಂತರಿಕ ಶೂನ್ಯತೆಯಿಂದ ಉಂಟಾಗುವ ಕೀಳರಿಮೆಯ ಫಲವಾಗಿ ವ್ಯಕ್ತಿಯು ತನ್ನನ್ನು ತಾನೇ ದ್ವೇಷಿಸಲು ಪ್ರಾರಂಭಿಸುತ್ತಾನೆ. ಈ ಆತ್ಮದ್ವೇಷವೇ ಅನ್ಯರನ್ನು ದ್ವೇಷಿಸುವುದಕ್ಕೆ ಕಾರಣ, ಎಲ್ಲ ಹಿಂಸಾತ್ಮಕ ಪ್ರವೃತ್ತಿಗಳಿಗೂ ಕಾರಣ. ಅದಕ್ಕಾಗಿಯೇ ನಾವು ತುಂಬು ಜೀವನವನ್ನು ನಡೆಸಬೇಕು ಎಂದು ಹೇಳುವುದು. ಸಾರ್ಥಕತೆಯ ಭಾವ ನಮ್ಮ ಅಂತರಂಗವನ್ನು ತುಂಬಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಮನಸ್ಸಿನಲ್ಲುಂಟಾಗುವ ಅಸಮಾಧಾನ ಮತ್ತು ಅಸಂತೋಷಗಳು ನಮ್ಮ ಮಾತು, ಕೃತಿ, ವರ್ತನೆಗಳ ಮೂಲಕ ಹೊರಗೆ ವ್ಯಕ್ತವಾಗಿ ಪರಸ್ಪರ ಮಾನವೀಯ ಸಂಬಂಧವನ್ನು ಕೆಡಿಸುತ್ತವೆ. ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ಸಮಯದಲ್ಲಿ ಬೆಳಗಾವಿಯ ಹರಿಪದ ಮಿತ್ರನ ಮನೆಯಲ್ಲಿ ಕೆಲವು ದಿನಗಳು ತಂಗಿದ್ದರು. ತನ್ನ ಮೇಲಧಿಕಾರಿಗಳೊಡನೆ ಹರಿಪದ ಮಿತ್ರನ ಸಂಬಂಧ ಅಷ್ಟೊಂದು ಸಮಾಧಾನಕರವಾಗಿರಲಿಲ್ಲ. ಸ್ವಲ್ಪ ಕೆಣಕಿದರೂ ಅವನು ಕೆಂಡಾಮಂಡಲವಾಗುತ್ತಿದ್ದನು. ಸ್ವಾಮೀಜಿಯವರಿಗೆ ತನ್ನ ಪರಿಸ್ಥಿತಿಯನ್ನು ವಿವರಿಸಿದಾಗ ಅವರೆಂದರು:

"ಇತರರ ಬಗ್ಗೆ ನಮಗಿರುವ ಭಾವನೆಗಳು ನಮ್ಮ ವರ್ತನೆಯ ಮೂಲಕ ವ್ಯಕ್ತವಾಗುವುವು ಎಂಬುದನ್ನು ಮರೆಯಬೇಡ. ನಾವು ಅದನ್ನು ಮಾತಿನ ಮೂಲಕ ವ್ಯಕ್ತಪಡಿಸದಿದ್ದರೂ, ಜನರು ಅದಕ್ಕೆ ಅನುಗುಣವಾಗಿಯೇ ಪ್ರತಿಕ್ರಿಯೆ ತೋರಿಸುತ್ತಾರೆ. ನಮ್ಮೊಳಗೆ ಏನಿದೆಯೋ ಅದನ್ನೇ ನಾವು ಹೊರಗಡೆ ನೋಡುತ್ತೇವೆ. 'ನಾನು ಒಳ್ಳೆಯವನಾದಾಗ ಪ್ರಪಂಚವೂ ಒಳ್ಳೆಯದಾಗುತ್ತದೆ.' ಈ ಮಾತಿನ ಸತ್ಯತೆ ಯಾರಿಗೂ ಅರ್ಥವಾಗುವುದಿಲ್ಲ. ಇಂದಿನಿಂದ ಇತರರ ದೋಷಗಳನ್ನು ನೋಡುವುದನ್ನು ನಿಲ್ಲಿಸು. ಎಷ್ಟರಮಟ್ಟಿಗೆ ನಿನಗಿದು ಸಾಧ್ಯವಾಗುತ್ತದೋ ಅಷ್ಟರಮಟ್ಟಿಗೆ ಇತರರ ಭಾವನೆ ಮತ್ತು ಪ್ರತಿಕ್ರಿಯೆಗಳೂ ಬದಲಾಗುವುವು" (ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ, ಪು. ೩೭). ದೋಷ ನೋಡುವುದನ್ನು ನಿಲ್ಲಿಸುವ ಪ್ರಯತ್ನದೊಡನೆ ಒಂದು ಹೊಸ ಅಧ್ಯಾಯ ತನ್ನ ಜೀವನದಲ್ಲಿ ಪ್ರಾರಂಭವಾಯಿತೆಂದು ಹರಿಪದ ಮಿತ್ರನು ಹೇಳುತ್ತಾನೆ.

ಸ್ವಾಮೀಜಿಯವರ ಈ ಮೇಲಿನ ಉಪದೇಶವು ಪ್ರಕ್ಷೇಪಣವೆಂಬ ಮಾನಸಿಕ ಪ್ರವೃತ್ತಿಯನ್ನು ಸೂಚಿಸುತ್ತದೆ. ನಾವಿಷ್ಟಪಡದ, ನಮ್ಮೊಳಗಿರುವ ದೋಷದೌರ್ಬಲ್ಯಗಳನ್ನು ಹೊರಗೆ ಪ್ರಕ್ಷೇಪಿಸಿ ಅವುಗಳನ್ನು ಇತರರಲ್ಲಿ ನೋಡುತ್ತೇವೆ, ಅಷ್ಟೇ ಅಲ್ಲದೆ, ನಮಗವು ಅಸಹನೀಯವಾಗುತ್ತವೆ. "ಪಾಪಪ್ರಜ್ಞೆಯನ್ನು ಕೆರಳಿಸುವ ಯಾವುದಾದರೂ ಪ್ರವೃತ್ತಿಯು ನಮ್ಮೊಳಗಿದ್ದರೆ ನಾವು ಸಾಮಾನ್ಯವಾಗಿ ಅದನ್ನು ಇತರರ ಮೇಲೆ ಆರೋಪಿಸುತ್ತೇವೆ. ನಾವು ಅದು ಮಿಡಲು ಪ್ರಯತ್ನಿಸುವ ಆ ಪ್ರವೃತ್ತಿಯನ್ನು ಇತರರಲ್ಲಿ ನೋಡಿದಾಗ ನಮಗೆ ಅಸಹನೀಯವೆನಿಸುತ್ತದೆ. ಇತರರ ಒಳತೋಟಿ, ದೊಡ್ಡಸ್ತಿಕೆ ಅಥವಾ ಸಣ್ಣತನದ ಬಗ್ಗೆ ಯಾವಾಗಲೂ ದೂರುವ ವ್ಯಕ್ತಿಯಲ್ಲಿ ಅದೇ ದೌರ್ಬಲ್ಯವಿರುವುದು ಕಂಡುಬರುತ್ತದೆ" (Rose Night, *"A Modern Introduction to Psychology"*, P.197).

ಇದೇ ಭಾವನೆಯನ್ನು ಪ್ರತಿಧ್ವನಿಸುತ್ತ ಪ್ರಸಿದ್ಧ ಮನಶ್ಶಾಸ್ತ್ರಜ್ಞ ಕೆನ್ ವಿಲ್ಬರ್ ಹೀಗೆ ಹೇಳುತ್ತಾರೆ: "ಜಗತ್ತು ನಮ್ಮನ್ನು ದ್ವೇಷಿಸುತ್ತಿದೆ ಎಂದು ನಾವು ಭಾವಿಸುವುದಕ್ಕೆ ಕಾರಣ, ನಮ್ಮ ಮನಸ್ಸಿನ ಒಂದು ಭಾಗ ನಮಗರಿವಿಲ್ಲದಂತೆ ಮೆತ್ತಗೆ ಜಗತ್ತನ್ನು ದ್ವೇಷಿಸುತ್ತಿರುತ್ತದೆ." ಹಾಗೆಯೇ ಇದು ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಲಾಗದ ಸ್ಥಿತಿಯನ್ನೂ ಸೂಚಿಸುತ್ತದೆ. ನಮ್ಮ ಬೆಳವಣಿಗೆಗೆ ಇತರರ ಪ್ರೀತಿಯ ಆವಶ್ಯಕತೆ ಇರುವಂತೆ, ಇತರರನ್ನು ಪ್ರೀತಿಸುವುದೂ ನಮಗೆ ಅವಶ್ಯಕ. ಇತರರನ್ನು ಪ್ರೀತಿಸಲು ನಮಗೆ ಸಾಧ್ಯವಾದರೆ ಇತರರು ನಮ್ಮನ್ನು ದ್ವೇಷಿಸುತ್ತಿರುವರು ಎಂದು ನಮಗನಿಸುವುದೇ ಇಲ್ಲ. ನಮ್ಮ ಪ್ರೀತಿ ಸಹಾನುಭೂತಿಗಳನ್ನು ಹೊರಗೆ ವ್ಯಕ್ತಪಡಿಸಲು ಸಾಧ್ಯವಾಗದಿದ್ದಾಗ ಸ್ವಾಭಾವಿಕವಾಗಿಯೇ ನಮ್ಮ ದೌರ್ಬಲ್ಯಗಳನ್ನೇ ಹೊರಗೆ ಪ್ರಕ್ಷೇಪಿಸಿ ಅವುಗಳ ಪ್ರತಿಬಿಂಬಗಳನ್ನು ಹೊರಗಡೆ ಕಾಣುತ್ತೇವೆ. "ಇತರರ ಕಟುಟೀಕೆ (ನಮ್ಮದೇ) ಆತ್ಮಕತೆಯ ತುಣುಕುಗಳು" ಎಂದು ಕೆನ್ ವಿಲ್ಬರ್ ಹೇಳುತ್ತಾರೆ. ಈ ಎಲ್ಲ ಮನಶ್ಶಾಸ್ತ್ರೀಯ ತಥ್ಯಗಳು ಸ್ವಾಮಿ ವಿವೇಕಾನಂದರು ಒತ್ತಿ ಹೇಳುವ ವೈಯಕ್ತಿಕ ಪರಿವರ್ತನೆಯನ್ನು ಸಮರ್ಥಿಸುತ್ತವೆ. ಅವರ ಮಾತನ್ನು ಮತ್ತೊಮ್ಮೆ ನೆನಪಿಸಿಕೊಳ್ಳೋಣ: "ಪ್ರೀತಿ, ಸದ್ಗುಣ ಮತ್ತು ಪಾವಿತ್ರ್ಯದಲ್ಲಿ ನಾವು ಮುಂದುವರಿದಂತೆ ಬಾಹ್ಯದಲ್ಲಿಯೂ ಅವನ್ನು ನೋಡುತ್ತೇವೆ. ನಾನು ಇತರರನ್ನು ಖಂಡಿಸುವುದೆಲ್ಲ ಕೊನೆಗೆ ನಿಜವಾಗಿ ನನ್ನನ್ನೇ ಖಂಡಿಸಿಕೊಂಡಂತೆ. ನೀವು ವ್ಯಷ್ಟಿಯನ್ನು ಸರಿಪಡಿಸಿಕೊಂಡರೆ (ನಿಮಗಿದು ಸಾಧ್ಯ), ಸಮಷ್ಟಿ ತನಗೆ ತಾನೇ ತಿದ್ದಿಕೊಳ್ಳುವುದು" (ಕೃತಿಶ್ರೇಣಿ, ೧. ೨೭೬).

ಈ ಪ್ರಕ್ಷೇಪಣಾ ಪ್ರವೃತ್ತಿಯ ಇನ್ನೊಂದು ಮುಖವಿದೆ. ನಾವು ಯಾವುದನ್ನು ಹೊರಗೆ ಕಳಿಸುತ್ತೇವೆಯೋ, ಅದು ಯಾವುದೋ ರೂಪದಲ್ಲಿ, ಯಾವುದೋ ಸಮಯದಲ್ಲಿ, ಮತ್ತು ಯಾವುದಾದರೂ ರೀತಿಯಲ್ಲಿ ನಮಗೇ ಹಿಂದಿರುಗಿ ಬರುತ್ತದೆ. ಅದು ಹಿಂದಿರುಗಿ ಬಂದಾಗ ನಾವು ಕಳಿಸಿರುವುದೇ ನಮಗೆ ಮರಳಿ ಬರುತ್ತಿದೆ ಎಂಬುದು ತಿಳಿದುಬರುವುದಿಲ್ಲ, ಯಾವುದೇ ತಪ್ಪಿಲ್ಲದಿದ್ದರೂ ನಾವಿದನ್ನು ಅನುಭವಿಸಬೇಕಾಗಿದೆಯಲ್ಲ ಎಂದು ಆಗ ಪರಿತಪಿಸುತ್ತೇವೆ. ಈ ವಿಷಯವನ್ನು ಸ್ವಾಮೀಜಿಯವರ ಮಾತಿನಲ್ಲಿಯೇ ಕೇಳೋಣ: "ಪ್ರತಿಯೊಂದು ಹೀನ ಆಲೋಚನೆಯೂ ಕೂಡ ನಮ್ಮ ಕಡೆ ತಿರುಗುವುದು. ನೀವು ಒಂದು ನಿರ್ಜನವಾದ ಗವಿಯೊಳಗೆ ಕುಳಿತು ಮಾಡಿದ ಕೆಟ್ಟ ಆಲೋಚನೆಗಳೂ ಕೂಡ ಒಂದು ಕಡೆ ಶೇಖರಿಸಲ್ಪಡುವುವು ಮತ್ತು ಯಾವುದಾದರೊಂದು ದುಃಖದ ರೂಪದಲ್ಲಿ ಮಹಾವೇಗದಿಂದ ನಿಮ್ಮ ಕಡೆಗೆ ಹಿಂತಿರುಗುವುವು. ದ್ವೇಷ ಅಸೂಯೆಗಳನ್ನು ನೀವು ತೋರಿದರೆ ಅವು ಚಕ್ರಬಡ್ಡಿ ಸಮೇತ ನಿಮಗೆ ಹಿಂತಿರುಗಿ ಬರುತ್ತವೆ. ಯಾವ ಶಕ್ತಿಯೂ ಅದನ್ನು ತಪ್ಪಿಸಲಾರದು. ಒಂದು ಬಾರಿ ಅದನ್ನು ಚಲಿಸುವಂತೆ ಮಾಡಿದರೆ ಅದರ ಫಲವನ್ನು ಅನುಭವಿಸಲೇಬೇಕು. ಇದನ್ನು ನೆನಪಿನಲ್ಲಿಟ್ಟುಕೊಂಡರೆ ನೀವು ಕೆಟ್ಟದನ್ನು ಮಾಡುವುದು ನಿಲ್ಲುತ್ತದೆ" (ಕೃತಿಶ್ರೇಣಿ, ೨. ೪೩೫).

ಆತ್ಮದ್ವೇಷದ ದುಷ್ಪರಿಣಾಮಗಳನ್ನು 'ಹಿತೋಪದೇಶ' ಗ್ರಂಥವು ಒಂದು ಉದಾಹರಣೆಯ ಮೂಲಕ ತಿಳಿಸುತ್ತದೆ.

ರೋಗ ಶೋಕ ಪರಿತಾಪಬಂಧನವ್ಯಸನಾನಿ ಚ ।
ಆತ್ಮಾಪರಾಧವೃಕ್ಷಾಣಾಂ ಫಲಾನ್ಯೇತಾನಿ ದೇಹಿನಾಮ್ ॥

"ಆತ್ಮಾಪರಾಧವೆಂಬ ವೃಕ್ಷವು ಐದು ಬಗೆಯ ಫಲಗಳನ್ನು ಬಿಡುತ್ತವೆ. ಅವು ಯಾವುವೆಂದರೆ ರೋಗ, ಶೋಕ, ಮನಸ್ತಾಪ, ಬಂಧನ ಮತ್ತು ದುಶ್ಚಟ."

ನಿರ್ಭಯತೆಯ ಅಭಯದಾನ

ನಮ್ಮ ಜೀವನವನ್ನು ಉತ್ತಮವಾಗಿಸಲು ಅತ್ಯಂತ ಮುಖ್ಯವಾಗಿ ನಮಗೆ ಬೇಕಾಗಿರುವ ಗುಣ ನಿರ್ಭಯತೆ. ಸ್ವಾಮಿ ವಿವೇಕಾನಂದರು ಇದಕ್ಕೆ ನೀಡುವಷ್ಟು ಒತ್ತನ್ನು ಮತ್ತಾರೂ ನೀಡುವುದಿಲ್ಲ. ನಾವು ಭಯದಿಂದ ನೀತಿವಂತರಾಗಿರಲು ಪ್ರಯತ್ನಿಸುತ್ತೇವೆ. ಅವಮಾನದ ಭಯದಿಂದ ಸಭ್ಯರಾಗಿರುತ್ತೇವೆ. ಸೋಲಿನ ಭಯದಿಂದ ಏನನ್ನೂ ಸಾಧಿಸಲು ಪ್ರವೃತ್ತರಾಗುವುದಿಲ್ಲ. ಅನಿಶ್ಚಿತತೆಯ ಭಯದಿಂದ ಯಾವುದೇ ಹೊಸತನ್ನು ಮಾಡಲು ಹಿಂಜರಿಯುತ್ತೇವೆ. ಅನೇಕರು ನಿಂದೆಯ ಭಯದಿಂದ ಮುಂದೆ ಹೋಗುವುದೇ ಇಲ್ಲ. ಅಪಾಯದ ಭಯದಿಂದ ಯಾವುದೇ ಸವಾಲನ್ನು ಸ್ವೀಕರಿಸಲು ಉಪಾಯದಿಂದ ನುಣುಚಿಕೊಳ್ಳುತ್ತೇವೆ. ಮುಂದಾಗುವ ರೋಗದ ಭಯದಿಂದ ಇರುವ ಆರೋಗ್ಯವನ್ನು ಕೆಡಿಸಿಕೊಳ್ಳುತ್ತೇವೆ. ಕೆಟ್ಟವನೆಂದು ಅನಿಸಿಕೊಳ್ಳಬೇಕಾಗುತ್ತದೆ ಎಂಬ ಭಯದಿಂದ ಕಷ್ಟಪಟ್ಟು ಒಳ್ಳೆಯವರಾಗಿರಲು ಪ್ರಯತ್ನಿಸುತ್ತೇವೆ. ಏಕಾಂಗಿತನದ ಭಯದಿಂದ ಎಲ್ಲ ವಿಷಯಗಳಲ್ಲಿ ಸ್ವಂತಿಕೆಯನ್ನು ಕಳೆದುಕೊಳ್ಳುತ್ತೇವೆ. ಮಾನದ ಭಯ, ಜನರ ಭಯ, ಪರೀಕ್ಷೆಯ ಭಯ, ಕೆಲಸದ ಭಯ, ವಿವಾಹಿತ ಜೀವನದ ಭಯ, ಹೊಸ ಜಾಗ ಪರಿಸರಗಳ ಭಯ, ಹಲವು ತೊಂದರೆ ತಾಪತ್ರಯಗಳ ಭಯ, ವೃದ್ಧಾಪ್ಯದ ಭಯ, ವಯಸ್ಸಾದಂತೆ ಸೌಂದರ್ಯವನ್ನು ಕಳೆದುಕೊಳ್ಳುವ ಭಯ, ಸಾವಿನ ಭಯ, ಮರಣೋತ್ತರ ಭಯ – ಹೀಗೆ ನೂರಾರು ಭಯ ಆತಂಕಗಳು ನಮ್ಮನ್ನು ಕಾಡುತ್ತಿರುತ್ತವೆ ಹಾಗೂ ನಮ್ಮ ನಡೆನುಡಿಗಳನ್ನು ನಿಯಂತ್ರಿಸುತ್ತಿರುತ್ತವೆ. ಸ್ವಾಮಿ ವಿವೇಕಾನಂದರ ನಿರ್ಭಯ ಸಂದೇಶವನ್ನು ಆಲಿಸೋಣ : **"ವೀರಭೋಗ್ಯಾ ವಸುಂಧರಾ** – ವೀರನೇ ವಸುಂಧರೆಯನ್ನು ಅನುಭವಿಸುವವನು. ಈ ಮಾತು ಖಂಡಿತವಾಗಿಯೂ ಸತ್ಯ. ವೀರನಾಗು, ಸರ್ವದಾ **ಅಭೀಃ ಅಭೀಃ** ಎಂದು ಹೇಳು. ಎಲ್ಲರಿಗೂ **ಮಾಭೀಃ ಮಾಭೀಃ** ಎಂದು ಹೇಳು. ಭಯವೇ ಮೃತ್ಯು, ಭಯವೇ ಪಾಪ, ಭಯವೇ ನರಕ, ಭಯವೇ ವ್ಯಭಿಚಾರ. ಜಗತ್ತಿನಲ್ಲಿ ಎಷ್ಟು ಅಸತ್ತಿನ ಅಥವಾ ಮಿಥ್ಯೆಯ ಭಾವಗಳು ಇವೆಯೋ, ಅವೆಲ್ಲ ಈ ಭಯರೂಪಿ ಸೈತಾನನಿಂದಲೇ ಬಂದವು" (ಕೃತಿಶ್ರೇಣಿ, ೮. ೧೧೫).

ಸಾಹಸಪ್ರಿಯ ಯುವಕನೋರ್ವನು ದೂರದ ಬೆಟ್ಟಗಾಡಿನ ಪ್ರದೇಶದಲ್ಲಿ ಓಡಾಡುತ್ತಿದ್ದನು. ನಿಸರ್ಗಸೌಂದರ್ಯದಿಂದ ಮೆರೆಯುತ್ತಿದ್ದ ಫಲವತ್ತಾದ ಪ್ರದೇಶ. ಆ ಪ್ರಕೃತಿಯ ಮಡಿಲಲ್ಲಿ ಒಂದು ಹಳ್ಳಿ. ಆ ಹಳ್ಳಿಯ ಜನರನ್ನು ನೋಡಿ ಯುವಕನಿಗೆ ಆಶ್ಚರ್ಯವಾಯಿತು. ಅವರ ದೇಹ ಕೃಶವಾಗಿತ್ತು, ಮುಖ ಕಾಂತಿಹೀನವಾಗಿತ್ತು, ಎಲ್ಲರೂ ಜೋಲು ಮುಖದವರೇ. ಸಂತೋಷದ ಛಾಯೆ ಎಲ್ಲೆಲ್ಲಿಯೂ

ಇಲ್ಲ, ಎಲ್ಲೆಲ್ಲೂ ವಿಷಾದದ ಮೋಡ ಕವಿದಿತ್ತು. ಇಂತಹ ಸುಂದರ ಪ್ರದೇಶದಲ್ಲಿ, ಇಂತಹ ಫಲವತ್ತಾದ ಜಾಗದಲ್ಲಿ ಜನರೇಕೆ ಹೀಗಿದ್ದಾರೆ ಎಂದು ಯುವಕನಿಗೆ ಅಚ್ಚರಿ. ದೂರದಲ್ಲಿ ಕುಳಿತಿದ್ದ ಸಾಧುವೊಬ್ಬರನ್ನು ಯುವಕನು ಸಂಧಿಸಿ, ಜನರ ಈ ದುಸ್ಥಿತಿಗೆ ಕಾರಣವೇನೆಂದು ಕೇಳಿದನು. "ಎದುರುಗಡೆ ಇರುವ ಬೆಟ್ಟದ ಮೇಲೆ ಬೃಹದಾಕಾರದ ಭಯಂಕರವಾದ ರಾಕ್ಷಸನಿರುವನು. ಅವನು 'ನಿಮ್ಮನ್ನು ತಿಂದು ಬಿಡುತ್ತೇನೆ' ಎಂದು ಹೆದರಿಸುತ್ತಿರುವನು, ಇದರ ಭಯದಿಂದಲೇ ಜನರು ಈ ಸ್ಥಿತಿಯಲ್ಲಿರುವವರು" ಎಂದು ಸಾಧು ವಿವರಿಸಿದರು. ತಾನು ಆ ರಾಕ್ಷಸನನ್ನು ನೋಡಬೇಕೆಂದು ಯುವಕನು ಹೇಳಿದನು. ಸಾಧುವು ಬೇಡವೆಂದು ಎಷ್ಟೇ ಹೆದರಿಸಿದರೂ ಕೇಳದೆ ಯುವಕನು ನೇರವಾಗಿ ಬೆಟ್ಟವನ್ನೇರಿದನು. ಆಕಾಶದಷ್ಟು ಎತ್ತರಕ್ಕೆ ರಾಕ್ಷಸನು ನಿಂತುಕೊಂಡಿದ್ದನು. ಅತನದು ಭಯಂಕರ ಆಕೃತಿ. ಯುವಕನು ಎದೆಗೆಡದೆ ನಿಧಾನವಾಗಿ ರಾಕ್ಷಸನೆಡೆಗೆ ಮುನ್ನಡೆದನು. ಅವನು ಸಮೀಪಿಸುತ್ತಿದ್ದಂತೆ ರಾಕ್ಷಸನ ಆಕೃತಿ ಕಿರಿದಾಗುತ್ತ ಬಂತು. ರಾಕ್ಷಸನ ಹತ್ತಿರ ಹೋದಾಗ ಅವನು ಚಿಕ್ಕ ಗೊಂಬೆಯಂತಾದನು. ಯುವಕನು ತನ್ನ ಹಸ್ತವನ್ನು ಮುಂದೆ ಚಾಚಿದನು. ಆ ಗೊಂಬೆಯಾಕಾರದ ರಾಕ್ಷಸನು ಯುವಕನ ಹಸ್ತದ ಮೇಲೆ ನಿಂತನು. "ನೀನು ಯಾರು?" ಎಂದು ಯುವಕನು ಕೇಳಿದನು. "ನಾನು ಭಯ." "ಹೀಗೇಕೆ ಜನರನ್ನು ಹೆದರಿಸುವೆ?" ಆ ಗೊಂಬೆಯು ಹೇಳಿತು: "ಯಾರು ನನಗೆ ಹೆದರುತ್ತಾರೊ ಅವರಿಗೆ ನಾನು ಬೃಹದಾಕಾರವಾಗಿ ಕಾಣುತ್ತೇನೆ. ಯಾರು ನನ್ನನ್ನು ಎದುರಿಸುತ್ತಾರೊ ಅವರ ಪಾಲಿಗೆ ನಾನು ಕಿರಿದಾಗುತ್ತೇನೆ."

ನಾವೇಕೆ ಇಷ್ಟೊಂದು ಭಯಪಡುತ್ತೇವೆ? ಸ್ವಾಮಿ ವಿವೇಕಾನಂದರ ಪ್ರಕಾರ, ನಾವು ಪರಾವಲಂಬಿಗಳಾಗಿರುವುದರಿಂದ ನಾವು ಹೊರಗಿನಿಂದ, ಇತರರಿಂದ ತುಂಬ ನಿರೀಕ್ಷಿಸುತ್ತೇವೆ. ಆ ನಿರೀಕ್ಷೆ ಒಂದು ಮಿತಿಯನ್ನು ಮೀರಿದಾಗ, ನಮ್ಮ ನಿರೀಕ್ಷೆ ಸಫಲವಾಗದಿರುವ ಕಾತರತೆ, ಪಡೆದಿರುವುದನ್ನು ಕಳೆದುಕೊಳ್ಳುವ ಭಯ ನಮಗಿರಿವಿಲ್ಲದಂತೆಯೇ ನಮ್ಮನ್ನು ಕಾಡುತ್ತಿರುತ್ತವೆ. ಗಳಿಸಿರುವ ಪ್ರೀತಿ ಗೌರವಗಳನ್ನು ಎಲ್ಲಿ ಕಳೆದುಕೊಳ್ಳುತ್ತೇವೊ ಎಂಬ ಭಯ, ಇತರರ ಅಸಮಾಧಾನಕ್ಕೆ ಎಲ್ಲಿ ಒಳಗಾಗುತ್ತೇನೊ ಎಂಬ ಭಯ ನಮ್ಮನ್ನು ಮುಸುಕಿರುತ್ತದೆ. ಇದರಿಂದ ನಮ್ಮ ಮಾತು ವರ್ತನೆಗಳಲ್ಲಿ ಅಸ್ವಾಭಾವಿಕತೆ ಇರುತ್ತದೆ. ನಮ್ಮ ಅಂತರಂಗ ಸಾರ್ಥಕತೆಯ ಭಾವದಿಂದ ತುಂಬಿಕೊಂಡಿದ್ದಾಗ ಈ ರೀತಿಯ ಭಯಗಳಿಗೆ ಅವಕಾಶವಿರುವುದಿಲ್ಲ. ಈ ವಿಷಯದಲ್ಲಿ ಸ್ವಾಮೀಜಿಯವರ ವಾಣಿಯನ್ನು ಕೇಳಿ: "ನಮ್ಮ ಬಾಳಿನ ಶ್ರೇಷ್ಠತಮ ರಹಸ್ಯವೇ ಅಂಜಿಕೆ ಇಲ್ಲದಿರುವುದು. ನಿಮಗೆ ಏನು ಆಗಿಬಿಡುವುದೊ ಎಂದು ಅಂಜಬೇಡಿ. ಯಾರ ಆಸರೆಯ ಮೇಲೂ ನಿಲ್ಲಬೇಡಿ. ಎಲ್ಲ ಸಹಾಯವನ್ನು ತಿರಸ್ಕರಿದಾಗ ಮಾತ್ರ ನೀವು ಸ್ವತಂತ್ರರು. ನೀರಿನಿಂದ ತುಂಬಿರುವ ಸ್ಪಂಜು ಇನ್ನು ಹೆಚ್ಚಿನ್ನು ಹೀರಿಕೊಳ್ಳಲಾರದು" (ಕೃತಿ ಶ್ರೇಣಿ, ೧. ೨೯೭).

ಸ್ವಾತಂತ್ರ್ಯವೆಂಬ ಮಹಾಮಂತ್ರ

ಸ್ವಾಮಿ ವಿವೇಕಾನಂದರ ಸಂದೇಶದಲ್ಲಿ ಸ್ವಾತಂತ್ರ್ಯವೆಂಬ ಭಾವನೆ ಎದ್ದು ಕಾಣುತ್ತದೆ. ಎಲ್ಲ ವಿಷಯದಲ್ಲಿಯೂ ಅವರು ಸ್ವಾತಂತ್ರ್ಯವನ್ನೇ ಮೆಚ್ಚುತ್ತಿದ್ದರು. ಬೆಳವಣಿಗೆಗೆ ಸ್ವಾತಂತ್ರ್ಯವೇ ಮೂಲಸೂತ್ರ ಎಂಬುದು ಅವರ ಅಭಿಪ್ರಾಯವಾಗಿತ್ತು. ಒಂದು ವ್ಯಕ್ತಿಯನ್ನು ಹಲವಾರು ನೀತಿ ನಿಯಮಗಳಿಂದ ಕಟ್ಟಿ ಹಾಕಿದರೆ, ಅವನು ಅನೇಕ ಕಟ್ಟುಪಾಡುಗಳ ಕೋಟೆಯೊಳಗೆ ಬಂಧಿತನಾದರೆ, ತನ್ನ ಆಂತರಿಕ ಸತ್ವವನ್ನು ವ್ಯಕ್ತಪಡಿಸಲು ಮುಕ್ತ ವಾತಾವರಣ ಇಲ್ಲದಿದ್ದರೆ, ಸ್ವಾಭಾವಿಕವಾಗಿಯೇ ಅವನ ಬೆಳವಣಿಗೆ ಕುಂಠಿತವಾಗುತ್ತದೆ. ಒಂದು ಸಸಿಯನ್ನು ಮೊದಲು ಕುಂಡದಲ್ಲಿ ಬೆಳೆಸಬೇಕು. ಅನಂತರ ಅದನ್ನು ನೆಲದಲ್ಲಿ ನೆಡಬೇಕು. ಆಗ ಅದು ವಿಸ್ತಾರವಾಗಿ ಬೇರುಗಳನ್ನು ವಿಸ್ತರಿಸಿ ವಿಶಾಲವೃಕ್ಷವಾಗಿ ಬೆಳೆಯುತ್ತದೆ. ಇದಲ್ಲದೆ ಅದನ್ನು ಕುಂಡದಲ್ಲಿಯೇ ಉಳಿಸಿದರೆ ಅದು ತನ್ನ ಪೂರ್ಣಪ್ರಮಾಣಕ್ಕೆ ಬೆಳೆಯಲಾರದು.

ಸ್ವಾಮಿ ವಿವೇಕಾನಂದರ ಪ್ರಕಾರ ಸ್ವಾತಂತ್ರ್ಯದ ಮೂರು ಮುಖ್ಯ ಲಕ್ಷಣಗಳಾವುವೆಂದರೆ, ೧. **ಇತರರ ಸ್ವಾತಂತ್ರ್ಯವನ್ನು ಗೌರವಿಸುವುದು, ೨. ಸ್ವ-ಶಿಸ್ತು** ಮತ್ತು ೩. **ತನಗೆ ತಾನೇ ಜವಾಬ್ದಾರನಾಗಿರುವುದು.** ನಿಜವಾದ ಸ್ವಾತಂತ್ರ್ಯಪ್ರಿಯನು ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟುಮಾಡುವುದಿಲ್ಲ. ತನ್ನ ಯಾವುದೋ ದೌರ್ಬಲ್ಯಕ್ಕೆ ವಶನಾಗಿರುವವನು ಮಾತ್ರ ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟುಮಾಡಬಲ್ಲ. ಸ್ವಾತಂತ್ರ್ಯದ ಹೆಸರಿನಲ್ಲಿ ಯಾವ ಶಿಸ್ತನ್ನೂ ಬಯಸದವನು ತನ್ನ ಇಂದ್ರಿಯ, ಆಸೆ, ಭಾವೋದ್ವೇಗಗಳಿಗೆ ದಾಸನಾಗಿರುತ್ತಾನೆ. ಸ್ವತಂತ್ರ ಮನೋಭಾವದ ವ್ಯಕ್ತಿಯು ತನಗಾಗುವುದಕ್ಕೆಲ್ಲ, ತಾನಿರುವ ಸ್ಥಿತಿಗೆಲ್ಲ ತಾನೇ ಜವಾಬ್ದಾರ ಎಂದು ಭಾವಿಸುತ್ತಾನೆ; ಇತರರನ್ನಾಗಲಿ, ಸಮಾಜವನ್ನಾಗಲಿ, ದೇವರನ್ನಾಗಲಿ ದೂರುವುದಿಲ್ಲ. ದೂರುವುದೆಂದರೆ ಪರಾವಲಂಬನೆಯಾಗುತ್ತದೆ, ಸ್ವಾತಂತ್ರ್ಯದಿಂದ ದೂರವಾದಂತಾಗುತ್ತದೆ.

ಅನೇಕ ವಿಷಯಗಳಿಗೆ ನಾವೆಷ್ಟೇ ಬದ್ಧರಾಗಿದ್ದರೂ ನಮ್ಮಲ್ಲಿ ಸ್ವಾತಂತ್ರ್ಯದ ಕಲ್ಪನೆಯಿದೆ. ಬಂಧನದ ಅರಿವು ಮತ್ತು ಮುಕ್ತಿಯ ಬಯಕೆ – ಇದೇ ಆಧ್ಯಾತ್ಮಿಕತೆಯ ಲಕ್ಷಣ, ಇದೇ ಮನುಷ್ಯತ್ವದ ಲಕ್ಷಣವೂ ಕೂಡ. ನಮ್ಮ ನಿಜಸ್ವರೂಪವು ಅಧ್ಯಾತ್ಮವಾಗಿರುವುದರಿಂದಲೇ ಹಾಗೂ ಅಧ್ಯಾತ್ಮದಲ್ಲಿ ಮಾತ್ರ ಮುಕ್ತಿ ಸಾಧ್ಯವಾಗಿರುವುದರಿಂದಲೇ ನಮ್ಮಲ್ಲಿ ಸ್ವಾತಂತ್ರ್ಯದ ಬಯಕೆ ಇರುವುದು. ಭೌತಿಕವಾಗಿ ಸ್ವಾತಂತ್ರ್ಯವಿಲ್ಲ – ದೇಹವು ಬಾಹ್ಯ ವಿಷಯಗಳನ್ನು ಅವಲಂಬಿಸಿರುತ್ತದೆ. ಮನಸ್ಸು ಅನ್ಯ ವಿಚಾರಾವಲಂಬಿ. ಆದ್ದರಿಂದ ದೇಹೇಂದ್ರಿಯ ಮಾನಸಿಕ ಹಂತಗಳಲ್ಲಿ ನಿಜವಾದ ಸ್ವಾತಂತ್ರ್ಯ ಸಾಧ್ಯವಿಲ್ಲ. ಈ ಹಂತಗಳಲ್ಲಿ ಸ್ವಾತಂತ್ರ್ಯವೆಂದರೇನೇ ದಾಸ್ಯ! ದೇಹವು ಪರಾವಲಂಬಿಯಾಗಿರಲಿ, ಇಂದ್ರಿಯಗಳು ಪರಾವಲಂಬಿಯಾಗಿರಲಿ, ಮನಸ್ಸೂ ಪರಾವಲಂಬಿಯಾಗಿರಲಿ. ಆದರೆ 'ನಾನು' ಮಾತ್ರ ದೇಹೇಂದ್ರಿಯ ಮನಸ್ಸುಗಳಿಗೆ ಅವಲಂಬಿಯಾಗಿರಬಾರದು. ಅವುಗಳು ಹೇಳಿದಂತೆ ಕೇಳಬಾರದು. ಅವುಗಳನ್ನು ನಮ್ಮ ಆಳುಗಳಂತೆ ಚೆನ್ನಾಗಿ ನೋಡಿಕೊಳ್ಳಬೇಕು, ಅಷ್ಟೇ. ವಿವೇಕಾನಂದರ ಮುಕ್ತಿ ಸಂದೇಶವನ್ನು ಕೇಳಿ : "ಯಾರು ತಮ್ಮ ಮೇಲೆ ಪರಿಣಾಮವನ್ನುಂಟುಮಾಡಲು ಯಾವುದಕ್ಕೂ ಯಥಾರ್ಥವಾಗಿಯೂ ಅವಕಾಶ ಕೊಡರೋ, ಯಾರು ಬಾಹ್ಯ ಪ್ರಪಂಚದ ಆಘಾತದಿಂದ ಹರ್ಷವನ್ನಾಗಲಿ ದುಃಖವನ್ನಾಗಲಿ

ಪಡೆಯರೋ, ಅಂತಹವರನ್ನು ಕಂಡುಹಿಡಿಯುವ ನಿಜವಾದ ಗುರುತನ್ನು ಜ್ಞಾಪಕದಲ್ಲಿಡುವುದು ಒಳ್ಳೆಯದು. ಆ ಗುರುತು ಏನೆಂದರೆ, ಒಂದು ಪರ್ವತವೇ ಆತನ ಮೇಲೆ ಬಿದ್ದು ಆತನು ನಜ್ಜುಗುಜ್ಜಾದರೂ ಆತನ ಮನಸ್ಸು ಕದಲದು. ಆತನಿಗೆ ಪ್ರಿಯವು ಪ್ರಾಪ್ತವಾಗಲಿ, ಅಪ್ರಿಯವು ಪ್ರಾಪ್ತವಾಗಲಿ ಆತನು ಮಾತ್ರ ಒಂದೇ ಸಮನಾಗಿರುತ್ತಾನೆ, ಆತನು ಎಲ್ಲ ಸ್ಥಿತಿಗಳಲ್ಲಿಯೂ ಸಮನಾಗಿ ಅಚಲನಾಗಿ ಇರುತ್ತಾನೆ" (ಕೃತಿಶ್ರೇಣಿ, ೧.೯೪-೯೫).

ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ. "ವಿಶ್ವದ ಗಾನಮಾಧುರ್ಯದಲ್ಲಿ ಮೂರು ಸ್ವರಗಳು ಮೇಲೆದ್ದು ನಿಲ್ಲುವುವು. ಅವೇ ಸ್ವಾತಂತ್ರ್ಯ, ಶಕ್ತಿ ಮತ್ತು ಸಮತ್ವ" (ಕೃತಿಶ್ರೇಣಿ, ೧.೨೬೮). ಸ್ವಾಮಿ ವಿವೇಕಾನಂದರ ಗಾನಸಂದೇಶದ ಸ್ವರಗಳೂ ಈ ಮೂರು ಎಂದು ಹೇಳಬಹುದಲ್ಲವೆ?

ವಿಶಾಲ ಮನೋಭಾವ

ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳುವುದರ ಮೂಲಕ ನಮ್ಮ ದೌರ್ಬಲ್ಯ ಭಯ ಬಂಧನಗಳಿಂದ ಮುಕ್ತರಾಗಿ ಸ್ವಾತಂತ್ರ್ಯಾನಂದವನ್ನು ಅನುಭವಿಸಬಹುದು. ಮನೋವೈಶಾಲ್ಯತೆ ಹೇಗಿರಬೇಕೆಂಬುದನ್ನು ಸ್ವಾಮಿ ವಿವೇಕಾನಂದರು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ. ಒಂದು ಶಕ್ತಿವಂತವಾದ ಎತ್ತು ಇತ್ತು. ಅದಕ್ಕೆ ಉದ್ದವಾದ ಕೋಡುಗಳಿದ್ದವು. ಒಂದು ನೊಣ ಆ ಕೋಡಿನ ಮೇಲೆ ಕುಳಿತುಕೊಂಡಿತ್ತು. ಬಹಳ ಹೊತ್ತಾದ ಮೇಲೆ ನೊಣಕ್ಕೆ ಎತ್ತಿನ ಕಡೆ ಗಮನ ಹರಿಯಿತು. ತುಂಬ ಸಹಾನುಭೂತಿಯಿಂದ ನೊಣವು ಎತ್ತನ್ನು ವಿಚಾರಿಸಿತು: "ಬಸವರಾಯ, ಬಹಳ ಹೊತ್ತಿನಿಂದ ನಾನಿಲ್ಲಿ ಕುಳಿತಿದ್ದೇನೆ. ನಿನಗೇನೂ ಬೇಸರವಿಲ್ಲ ತಾನೆ?" ಎತ್ತು ತುಂಬ ನಿರ್ವಿಕಾರ ಭಾವದಲ್ಲಿ ಉತ್ತರಿಸಿತು: "ನೊಣ ಮಹಾಶಯ, ಖಂಡಿತವಾಗಿಯೂ ಇಲ್ಲ. ನೀನು ಇಡೀ ಸಂಸಾರವನ್ನೇ ಕರೆದುಕೊಂಡುಬಂದು ಇಲ್ಲಿ ನೆಲೆಸಿದರೂ ನನಗ್ಯಾವ ತೊಂದರೆಯೂ ಇಲ್ಲ." ವಿಶಾಲ ಮನೋಭಾವವಿದ್ದರೆ ಜಗತ್ತಿನ ಸಾಮಾನ್ಯ ಘಟನೆಗಳಾವುವೂ ನಮ್ಮನ್ನು ವಿಚಲಿತಗೊಳಿಸುವುದಿಲ್ಲ ಎಂಬುದನ್ನು ಈ ಕಥೆಯು ಸೂಚಿಸುತ್ತದೆ. ನಮ್ಮಲ್ಲಿ ಎಷ್ಟೊಂದು ಮನೋವೈಶಾಲ್ಯತೆ ಇರಬೇಕೆಂಬುದಕ್ಕೆ ವಿವೇಕಾನಂದರು ನಡೆದ ಘಟನೆಯೊಂದನ್ನು ಉದಾಹರಿಸುತ್ತಾರೆ. ಪೆಸಿಫಿಕ್ ಸಾಗರದಲ್ಲಿ ಜನರಿಂದ ತುಂಬಿದ ಕೆಲವು ಹಡಗುಗಳು ಹೋಗುತ್ತಿದ್ದವು. ಇದ್ದಕ್ಕಿದ್ದಂತೆಯೇ ಮಹಾ ಬಿರುಗಾಳಿ ಪ್ರಾರಂಭವಾಯಿತು. ಬೃಹದಾಕಾರದ ಅಲೆಗಳೆದ್ದು ಹಡಗುಗಳೆಲ್ಲ ಮುಳುಗುವ ಸ್ಥಿತಿಯಲ್ಲಿದ್ದುವು. ಒಂದು ಹಡಗು ಮಾತ್ರ ಹೇಗೋ ಬಿರುಗಾಳಿಯಿಂದ ತಪ್ಪಿಸಿಕೊಂಡು ದಡದ ಕಡೆ ಹೋಗುತ್ತಿತ್ತು. ಮುಳುಗುತ್ತಿದ್ದ ಉಳಿದ ಹಡಗುಗಳ ಜನರು ಹಡಗಿನ ಮೇಲ್ತುದಿಗೆ ಬಂದು, ಪಾರಾಗುತ್ತಿದ್ದ ಹಡಗಿನ ಜನರನ್ನು ಸಂತೋಷದಿಂದ ಹುರಿದುಂಬಿಸತೊಡಗಿದರು. ಎಂಥ ಅಪೂರ್ವ ಘಟನೆ !"

ನಾವು ದೈಹಿಕ, ಜೈವಿಕ, ಅಹಂಕೇಂದ್ರಿತ ವ್ಯಕ್ತಿತ್ವಕ್ಕೆ ಬದ್ಧರಾಗಿರುವುದರಿಂದಲೇ ಎಲ್ಲ ಬಗೆಯ ಹೊಡೆತಕ್ಕೆ ಒಳಗಾಗುತ್ತೇವೆ. ಈ ವ್ಯಕ್ತಿತ್ವದ ಪರಿಧಿಯಿಂದ ನಾವು ಹೊರಬಂದು ವಿಶ್ವಭಾವವನ್ನು ಬೆಳೆಸಿಕೊಳ್ಳಬೇಕೆಂದು ಸ್ವಾಮೀಜಿಯವರ ಅಭಿಪ್ರಾಯ. ಅಹಂಕಾರವನ್ನು ಹೇಗೆ ತುಳಿಯಬೇಕೆಂಬುದಕ್ಕೆ ಸ್ವಾಮೀಜಿಯವರು ಒಂದು ಉದಾಹರಣೆಯನ್ನು ಕೊಡುತ್ತಾರೆ. ಮಂಗವೊಂದು ತನ್ನ ಮರಿಯನ್ನು ತಬ್ಬಿಕೊಂಡು ಕಬ್ಬಿಣದ ಹಲಗೆಯ ಮೇಲೆ ಕುಳಿತು ಕೊಂಡಿತ್ತು. ಹಲಗೆಯ ಶಾಖವನ್ನು ನಿಧಾನವಾಗಿ ಏರಿಸಲಾಯಿತು. ಮೊದಲು ತನ್ನ ಮರಿಯನ್ನು ರಕ್ಷಿಸಲು ಅದನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡಿತು. ತನಗೆ ಶಾಖವನ್ನು ಸಹಿಸ ಲಾದಾಗ ತನ್ನನ್ನು ರಕ್ಷಿಸಿಕೊಳ್ಳಲು ಮರಿಯನ್ನು ಕೆಳಗೆ ಹಾಕಿ ಅದರ ಮೇಲೆ ತಾನು ಕುಳಿತುಕೊಂಡಿತು. ಹೀಗೆಯೇ ನಮ್ಮನ್ನು ನಾವು ವಿಷಯತಾಪದಿಂದ ರಕ್ಷಿಸಿಕೊಳ್ಳಲು, ನಮ್ಮ ಅಹಂಕಾರವನ್ನು ಬಲಿ ಕೊಡಬೇಕಾಗುತ್ತದೆ.

ದಿವ್ಯತೆಯ ದಿವ್ಯೌಷಧಿ

ಮೇಲಿನ ಎಲ್ಲ ಕಾಯಿಲೆಗಳಿಗೂ ಸ್ವಾಮಿ ವಿವೇಕಾನಂದರು ಸೂಚಿಸುವ ಒಂದೇ ಒಂದು ಔಷಧಿಯೆಂದರೆ 'ದಿವ್ಯತೆಯ ಅಭಿವ್ಯಕ್ತಿ.' "ದಿವ್ಯತೆಯನ್ನು ವ್ಯಕ್ತಪಡಿಸಿ, ಆಗ ಎಲ್ಲವೂ ಅದರ ಸುತ್ತ ಸಾಮರಸ್ಯದಿಂದ ಅಣಿಯಾಗುತ್ತವೆ" ಎಂದು ಅವರು ಘೋಷಿಸುತ್ತಾರೆ.

ಸ್ವಾಮೀಜಿಯವರು ಮುಂದುವರಿದು ಹೇಳುತ್ತಾರೆ: "ಈ ದೇಹವನ್ನು ಧಾರಣೆ ಮಾಡಿ ಎಷ್ಟು ಸುಖದುಃಖಗಳ, ಸಂಪತ್ತು ವಿಪತ್ತುಗಳ ತರಂಗಗಳಲ್ಲಿ ಸಿಕ್ಕಿಕೊಂಡಿರುವಿರಿ ! ಆದರೆ ತಿಳಿದುಕೊ. ಅವೆಲ್ಲ ಕ್ಷಣಮಾತ್ರ ಇರತಕ್ಕವು. ಇವುಗಳನ್ನೆಲ್ಲ ಗಮನಿಸತಕ್ಕ ಅಂಶಗಳೆಂದು ತಿಳಿಯಬೇಡ. 'ನಾನು ಅಜರಾಮರ ಚಿನ್ಮಯ ಆತ್ಮ' ಎಂಬೀ ಭಾವದಲ್ಲಿ ಪೂರ್ತಿಯಾಗಿ ತನ್ಮಯನಾಗಿಬಿಡು. ಪೂರ್ತಿ ತನ್ಮಯನಾಗಿ ಬಿಡಬಲ್ಲೆಯಾದರೆ, ದುಃಖಿಕಷ್ಟಗಳ ಕಾಲದಲ್ಲಿ ಈ ಭಾವ ತನ್ನಷ್ಟಕ್ಕೆ ತಾನೇ ಮನಸ್ಸಿನಲ್ಲಿ ಹುಟ್ಟುತ್ತದೆ – ಪ್ರಯತ್ನಪೂರ್ವಕವಾಗಿ ಈ ಭಾವವನ್ನು ಹುಟ್ಟಿಸಬೇಕಾಗುವುದಿಲ್ಲ. ಆ ದಿವಸ ವೈದ್ಯನಾಥ ಕ್ಷೇತ್ರದಲ್ಲಿ ಪ್ರಿಯನಾಥ ಮುಖ್ಯನ ಮನೆಗೆ ಹೋಗಿದ್ದೆ. ಅಲ್ಲಿ ಉಬ್ಬಸ ಬಂದು ಪ್ರಾಣ ಹೋಗಿಬಿಡುತ್ತದೆಯೋ ಎನ್ನುವ ಹಾಗಾಯಿತು. ಆದರೆ ಒಳಗಿನಿಂದ ಮಾತ್ರ ಪ್ರತಿ ಶ್ವಾಸದಲ್ಲಿಯೂ ಗಂಭೀರ ಧ್ವನಿ ಬರುವುದಕ್ಕೆ ಮೊದಲಾಯಿತು. 'ಸೋಽಹಂ' 'ಸೋಽಹಂ' ಎಂದು. ದಿಂಬಿಗೆ ಒರಗಿಕೊಂಡು ಪ್ರಾಣ ಹೋಗುವುದನ್ನೇ ನಿರೀಕ್ಷಿಸುತ್ತಿದ್ದೆ. ಆಗಲೂ ನೋಡಿದ್ದೇನೆಂದರೆ, ಒಳಗಿನಿಂದ ಕೇವಲ 'ಸೋಽಹಂ' 'ಸೋಽಹಂ' ಎಂಬ ಸದ್ದೇ ಬರುತ್ತಿತ್ತು" (ಕೃತಿಶ್ರೇಣಿ, ೮.೧೧೬).

ಅನಂತ ಪರಿಪೂರ್ಣತೆಯ ಮೂಲವು ನಮ್ಮೆಲ್ಲರಲ್ಲೂ ಇದೆ. ಎಲ್ಲೆಲ್ಲಿಯೂ ಇರುವ ಒಳಿತನ್ನೇ ನೋಡುವ ಆಶಾದಾಯಕ ಮನಸ್ಥಿತಿಯನ್ನೂ, ಪ್ರಯತ್ನಶೀಲತೆಯನ್ನೂ ನಾವು ಬೆಳೆಸಿಕೊಳ್ಳಬೇಕು. ಸುಮ್ಮನೆ ಕುಳಿತು, ನಮ್ಮ ದೇಹ ಮತ್ತು ಮನಸ್ಸುಗಳ ಅಪರಿಪೂರ್ಣತೆಯ ಬಗ್ಗೆ ಗೋಳಿಡುತ್ತಿದ್ದರೆ, ನಾವು ಏನನ್ನೂ ಗಳಿಸಿಕೊಳ್ಳಲಾಗುವುದಿಲ್ಲ. ಎಲ್ಲ ಕಷ್ಟನಷ್ಟಗಳ ಪರಿಸ್ಥಿತಿಯನ್ನೂ ಹಿಮ್ಮೆಟ್ಟಿ, ನಮ್ಮ ಚೇತನವನ್ನು ಉನ್ನತಮಟ್ಟಕ್ಕೆ ಒಯ್ಯುವುದು ವೀರಯೋಧನ ಪ್ರಯತ್ನಶೀಲತೆ ಮಾತ್ರವೇ.

– ಸ್ವಾಮಿ ವಿವೇಕಾನಂದ